ಎಂದು ಹೇಳಿ ಅವರಿಂದ ಅಪ್ಲಿಕೇಷನ್ ತೆಗೆದುಕೊಂಡು, 10-20 ರೂಪಾಯಿ ತೆಗೆದು ಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಒಂದೇ ಜಮೀನಿನಲ್ಲಿ ಇಬ್ಬರಿಗೆ ಕೊಟ್ಟಿರುವುದು ತಾಲ್ಲೂಕು ಸಮಾಲೋಚನಾ ಸಮಿತಿ ಮೇರೆ ಕೊಟ್ಟಿದೆ. ಆ ಕಮಿಟಿಯವರ ಸಲಹೆ ಮೀರಿ ಕೊಟ್ಟಿದ್ದರೆ ಆ ಅಧಿಕಾರಿಗಳದ್ದು ತಪ್ಪಾಗುತ್ತದೆ. ಒಂದೇ ಜಮೀನನ್ನು ಇಬ್ಬರಿಗೆ ಕೊಟ್ಟಿದ್ದರೆ ಆ ಕಮಿಟಿಯ ಶಿಫಾರಸಿಗನುಗುಣವಾಗಿ ಕೊಟ್ಟಿದ್ದಾರೆ. ಆದರ ವಿರುದ್ಧವಾಗಿ ಮಾಡಿದ್ದರೆ ಅದನ್ನು ನೋಡಬೇಕಾಗಿದೆ.

UNAUTHORISED CULTIVATION OF GOMAL LANDS IN SRINIVASAPUR TALUK

883. Sri S. BACHI REDDY (Srinivasapur).—

Will the Minister for Revenue be pleased to state :—

(*a*) the extent of Gomal lands under unauthorised cultivation in Srinivasapur Taluk ;

(*b*) the steps taken by the Government to evict persons from cultivating the above gomal lands ;

(*c*) the extent of land available in Srinivasapur Taluk for the distribution to the landless agriculturists ?

Sri N. HUTCHAMASTHY GOWDA (Minister for Revenue).—

(*a*) A.—G.
625—00.

(*b*) Action is being taken under section 94 of the Mysore Land Revenue Act to evict them from the lands and in cases where they are in unauthorised occupation prior to 1st July 1968 action is being taken to regularise lands provided they are insufficient holders, eligible for grant and the lands are available for disposal as per rules.

(*c*) A.—G.
2509—32.

ಶ್ರೀ ಎಸ್. ಬಾಚೀ ರೆಡ್ಡಿ : (ಅ) ಗೆ ಉತ್ತರವಾಗಿ 625 ಎಕರೆ ಎಂದು ಹೇಳಿದ್ದೀರಿ. ಅದುದರಿಂದ ಈ ಅನಧಿಕೃತ ಸಾಗುವಳಿಯನ್ನು ತಡೆಗಟ್ಟಲು ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಈ ಅಕ್ರಮ ಸ್ವಾಧೀನವನ್ನು ತಡೆಗಟ್ಟಲು ಮೊದಲು ನೋಟೀಸ್ ಕೊಡುತ್ತೇವೆ, ಅದು ನಿಮಗೆ ಸಲ್ಲತಕ್ಕದ್ದಲ್ಲ, ನಿಮಗೆ ಮಂಜೂರಾತಿ ಮಾಡುವುದಕ್ಕೆ ಆಗುವುದಿಲ್ಲ, ಇದು ಖಿಲ್ಲಾ ಮಾಡಬೇಕು ಎಂದು ನೋಟೀಸ್ ಕೊಡುತ್ತೇವೆ. ಅವರು ಮಾಡದೇ ಹೋದರೆ ಪೊಲೀಸಿನವರ ಸಹಾಯದಿಂದ ಎವಿಕ್ಟ್ ಮಾಡಿಸುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ಈಗ ಇರತಕ್ಕಂಥ ಪದ್ಧತಿ.

ಶ್ರೀ ಎಸ್. ಬಾಚೀ ರೆಡ್ಡಿ :—ನಮ್ಮ ತಾಲ್ಲೂಕಿನಲ್ಲಿ 2,509 ಎಕರೆ ಸಾಗುವಳಿ ಜಮೀನು ಇದೆ. ಅದು ಗೋಮಾಳವಾಗಿರುವುದರಿಂದ ಸಾಗುವಳಿಗೆ ಅವಕಾಶ ಇಲ್ಲದಂತಾಗಿದೆ. ಇನ್ನು ಕೆಲವು ಸಾಗುವಳಿಗೆ ಲಾಯಕ್ಕಾಗುವಂಥ ಜಮೀನು ಇದೆ. ಅಂಥಾದ್ದು ಯಾವುದು ಎಂದರೆ ಖರಾಬು ತೋಪು ಈಚಲುವನ ಇದೆ. ಇದು ಜಮೀನು ಲೆಕ್ಕದಲ್ಲಿ ಇರುತ್ತದೆಯೇ ವಿನಾ ಅದನ್ನು ಯಾವ ರೀತಿಯಾಗಿಯೂ ಮುಂದುವರೆಸಿಲ್ಲ. ಆದುದರಿಂದ ಸರ್ಕಾರದವರು ಇದನ್ನು ಪರಿಶೀಲಿಸಿ ಯೋಗ್ಯವಾದಂಥ ಜಮೀನುಗಳನ್ನು ಸಾಗುವಳಿ ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ನಾನಾ ಭಾಗಗಳಲ್ಲಿ ಬಂದಂಥ ವರದಿ ಪ್ರಕಾರ ಅಕ್ರಮ ಸ್ವಾಧೀನವಾಗಿರುವುದು ಒಂದು ಕಡೆ ಇದೆ. ಅದನ್ನು ಖುಲ್ಲಾ ಮಾಡಿಸುತ್ತಾರೆ. ಆದಕ್ಕಾಗಿ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರನ್ನು ಗೊತ್ತು ಮಾಡಿದ್ದೇವೆ. ಇನ್ನು ಕೆಲವು ಕಡೆ ಕೆರೆಗಳ ಅಂಗಳ, ಈಚಲುವನ, ಗುಂಡು ತೋಪು ಅಕ್ರಮ ಸ್ವಾಧೀನ ಮಾಡಿರುವುದೂ ಇದೆ. ಆದೂ ಅಲ್ಲದೆ ಅಲ್ಪ ಸ್ವಲ್ಪ ಫಾರೆಸ್ಟ್‌ನಲ್ಲೂ ಇದೆ. ಈ ತರಹ ಅಕ್ರಮ ಸ್ವಾಧೀನವನ್ನು ಮಾಡುವುದನ್ನು ತಡೆಗಟ್ಟಲು ಅದರಲ್ಲೂ ವ್ಯವಸಾಯಕ್ಕೆ ಲಾಯಕ್ಕಾಗಿ ಇರುವ ಜಮೀನುಗಳನ್ನು ಪರಿಶೀಲಿಸಿ ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಹಲಗೇ ಗೌಡ :—ಈ ಅಕ್ರಮವಾದ ಜಮೀನುಗಳಲ್ಲಿ ಏನು ಸಾಗುವಳಿ ಮಾಡುತ್ತಿದ್ದಾರೋ ಅವರನ್ನು ಹೊರಗಟ್ಟಬೇಕು. ಈ ಬಗ್ಗೆ ತಾಸೀಲ್ದಾರರನ್ನು ಕೇಳಿದರೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಡೆಪ್ಯೂಟಿ ಕಮಿಷನರನ್ನು ಕೇಳಿದರೆ ಅವರೂ ಕೂಡ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಪಂಚಾಯ್ತಿಯವರನ್ನು ಕೇಳಿದರೆ ಅವರೂ ಕೂಡ ಅದೇ ರೀತಿ ಹೇಳುತ್ತಾರೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಈ ಅಕ್ರಮ ಸ್ವಾಧೀನ ಮಾಡಿದಂಥ ಜಮೀನುಗಳನ್ನು ತೀರ್ಮಾನಿಸುವ ಬಗ್ಗೆ ಸ್ಪೆಷಲ್ ಡೆಪ್ಯೂಟಿ ಕಮಿಷನರ್ ಫಾರ್ ದರಖಾಸ್ತ್ ಎಂದು ಒಬ್ಬರನ್ನು ನೇಮಕ ಮಾಡಿದ್ದೇವೆ. ಅವರಿಗೆ ಈ ಬಗ್ಗೆ ಅಧಿಕಾರ ಕೊಟ್ಟಿದ್ದೇವೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ :—ಮಾನ್ಯ ಮಂತ್ರಿಗಳು ಇದಕ್ಕಾಗಿ ಒಬ್ಬರು ಸ್ಪೆಷಲ್ ಆಫೀಸರನ್ನು ನೇಮಿಸಿದ್ದೇವೆ ಎಂದು ಹೇಳಿದರು. ಈಗ ಅಕ್ರಮ ಸಾಗುವಳಿಯಲ್ಲಿರ ತಕ್ಕಂಥ 625 ಎಕರೆ ಜಮೀನುಗಳು ಏನು ಇವೆ, ಅದರಲ್ಲಿ ಎಷ್ಟು ಎಕರೆ ಜಮೀನುಗಳನ್ನು ಬಿಡಿಸಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಈಗ 230 ಅರ್ಜಿಗಳು ಬಂದಿವೆ. ಅದರಲ್ಲಿ 45 ಎಕರೆ ಕನ್‌ಫರ್ಮ್ ಆಗಿದೆ. ಇನ್ನು ಉಳಿದಿದ್ದು ವಿಚಾರಣೆ ನಡೆಯುತ್ತಾ ಇದೆ.

REPAIRS TO HOSPITAL BUILDING AT LAKSHMIPURA

884. Sri S. BACHI REDDY (Srinivasapura).—

Will the Minister for Health be pleased to state :—

(*a*) whether annual repairs of the Hospital Building at Lakshmipura in Srinivasapur Taluk is being carried out ;

(*b*) if not, the reason for the same ?